ಕರ್ನಾಟಕ ವಿಧಾನಸಭೆ

ಮಂಗಳವಾರ ೨೯ನೇ ಜನವರಿ ೨೦೦೨ ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦ ಗಂಟೆ ೦೦ ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

೧. ರಾಜ್ಯದಲ್ಲಿ ನಡೆದ ಛಾಪಾ ಕಾಗದ ಹಗರಣದ ಬಗ್ಗೆ ಸಿ.ಬಿ.ಐ. ತನಿಖೆಗೆ ವಹಿಸಲು ಒತ್ತಾಯ ಹಾಗು ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು)ರವರ ರಾಜೀನಾಮೆಗೆ ಒತ್ತಾಯಿಸಿ ವಿರೋಧ ಪಕ್ಷದವರಿಂದ ಧರಣಿ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿ ಹೂಡಿದ್ದರು)

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ನಾವು ಇಲ್ಲಿ ಧರಣಿ ಕುಳಿತಿದ್ದೇವೆ. ಈ ವಿಚಾರದ ಬಗ್ಗೆ ಸರ್ಕಾರಕ್ಕೆ ಈಗಾಗಲೇ ನಾವು ಸಾಕಷ್ಟು ಸಲ ತಿಳಿಸಿದ್ದೇವೆ. ನಕಲಿ ಛಾಪಾ ಕಾಗದದಿಂದಾಗಿ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯ ಕಡಿಮೆಯಾಗುತ್ತಿದೆ. ಇದು ಬಹಳ ಗಂಭೀರವಾದ ವಿಚಾರ. ಇದರಲ್ಲಿ ಒಂದು ರಾಜಕೀಯ ಒತ್ತಡವಿರುವುದರಿಂದ ಇದನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ಸದನದಲ್ಲಿರುವ ಎಲ್ಲಾ ವಿರೋಧ ಪಕ್ಷದ ಶಾಸಕರು ಧರಣಿ ಸತ್ಯಾಗ್ರಹ ಮತ್ತು ಬಹಿಷ್ಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿರುತ್ತಾರೆ. ಇದೇ ರೀತಿ ವಿಧಾನ ಪರಿಷತ್ತಿನಲ್ಲೂ ಕೂಡ ಇಡೀ ವಿರೋಧ ಪಕ್ಷದ ಶಾಸಕರುಗಳು ಧರಣಿ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಇದರಿಂದ ಸರ್ಕಾರ ಇದೊಂದು ಸಾರ್ವಜನಿಕ ಮಹತ್ವವಾದ ವಿಚಾರವೆಂದು ತಿಳಿದುಕೊಳ್ಳಬೇಕು. ಇದರಲ್ಲಿ ಯಾವುದೇ ಒಂದು ರಾಜಕೀಯ ಒತ್ತಡವಿಲ್ಲದೆ ಇನ್ವೆಸ್ಟಿಗೇಷನ್ ಆಗಬೇಕೆಂಬುದು ಬಹಳ ಪ್ರಮುಖವಾದ ವಿಚಾರವಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಮೊಂಡುತನ ಮಾಡಬಾರದು. ಹಿಂದೆ ಹಲವಾರು ಪ್ರಕರಣಗಳಲ್ಲಿ ಸರ್ಕಾರ ತಕ್ಷಣವೇ ಸಿ.ಬಿ.ಐ. ತನಿಖೆಗೆ ಒಪ್ಪಿಕೊಂಡಿರುವ ಉದಾಹರಣೆಗಳು ಇವೆ. ಕಂಬಾಲಪಲ್ಲಿ ಪ್ರಕರಣದ ಬಗ್ಗೆ ವಿರೋಧ ಪಕ್ಷದವರು ಒತ್ತಾಯ ಮಾಡಿದ ಸಂದರ್ಭದಲ್ಲಿ ತಕ್ಷಣವೇ ಸರ್ಕಾರ ಸ್ಪಂದನ ಮಾಡಿ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ವಹಿಸಿತು. ಈ ಸಂದರ್ಭದಲ್ಲಿ ಇದರ ಬಗ್ಗೆ ಸಹ ಸರ್ಕಾರ ಮೀನಾಮೇಷ ನೋಡದೆ ತಕ್ಷಣವೇ ಸಿ.ಬಿ.ಐ.ಗೆ ವಹಿಸಲು ಒಪ್ಪಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮೊನ್ನೆ ಖಾನಪುರದಲ್ಲಿರುವ ಕರೀಂಲಾಲಾನ ಮನೆಯ ಮೇಲೆ ಪೊಲೀಸರು ಧಾಳಿ ಮಾಡಿ

ಹಲವಾರು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

(ಗೊಂದಲ)

ಶ್ರೀ ಎನ್.ಸಂಪಂಗಿ:- ಮಾನ್ಯ ಅಧ್ಯಕ್ಷರೆ, ಅವರು ಪ್ರಶ್ನೋತ್ತರವಾದ ಮೇಲೆ ಮಾತನಾಡಲಿ. ನಾವು ಮಾತನಾಡುವುದು ಬೇಡವೆ? ಪ್ರಶ್ನೋತ್ತರವಾದ ಮೇಲೆ ಬೇಕಾದರೆ ಅವರು ಬಾವಿಗೆ ಬೀಳಲಿ! ತೊಂದರೆಯಿಲ್ಲ.

ಅಧ್ಯಕ್ಷರು:- ಅವರು ಮಾತನಾಡಿದ ಮೇಲೆ ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ಒಂದು ನಿಮಿಷ ತಡೆಯಿರಿ.

ಶ್ರೀ ಬಿ.ಆರ್.ನೀಲಕಂಠಪ್ಪ:-ಅವರ ಮೂಲ ಉದ್ದೇಶವೇನು? ಹೇಳಿದ್ದನ್ನೇ ಹೇಳುತ್ತಿದ್ದಾರೆ.

ಶ್ರೀ ಎನ್.ಸಂಪಂಗಿ:- ಇದು ಬಹಳ ಅನ್ಯಾಯ. ನಮ್ಮ ಚುಕ್ಕೆಗುರುತಿನ ಪ್ರಶ್ನೆಗಳು ಬರುವುದೇ ಅಪರೂಪ.

ಅಧ್ಯಕ್ಷರು:- ಅವರು ಮಾತನಾಡಿದ ಮೇಲೆ ತಮ್ಮಿಬ್ಬರಿಗೂ ಮಾತನಾಡಲು ಸಮಯ ಕೊಡುತ್ತೇನೆ.

ಶ್ರೀ ಎನ್.ಸಂಪಂಗಿ:- ಮಾನ್ಯ ಅಧ್ಯಕ್ಷರೆ, ನಮ್ಮ ಚುಕ್ಕೆ ಗುರುತಿನ ಪ್ರಶ್ನೆಗಳು ಬರುವುದೇ ಅಪರೂಪ. ಬಂದಿರುವಂಥ ಸಂದರ್ಭದಲ್ಲಿ ಹೀಗಾದರೆ ಹೇಗೆ? ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಬೇಕಾದರೆ ಅವರು ಮುಂದುವರೆಸಲಿ.

(ಗೊಂದಲ)

ಶ್ರೀ ಜಗದೀಶ ಶೆಟ್ಟರ್:- ನನ್ನ ಮಾತು ಮುಗಿಸಿದ ಮೇಲೆ ಅವರೇ ಮಾತನಾಡಲಿ.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಮಾತನಾಡಿ ಮುಗಿಸಿದ ನಂತರ ಶಾಪಿಬ್ಬರೂ ಮಾತನಾಡಿ. ಅದಕ್ಕೆ ನನ್ನ ಅಭ್ಯಂತರವಿಲ್ಲ.

ಶ್ರೀ ಎನ್.ಸಂಪಂಗಿ:- ಪ್ರಶ್ನೋತ್ತರಕ್ಕೆ ನಮಗೆ ಅವಕಾಶ ಮಾಡಿಕೊಡಿ ನಾವು ಸ್ವತಂತ್ರವಾಗಿ ಗೆದ್ದು ಬಂದಿರತಕ್ಕಂಥ ಅಭ್ಯರ್ಥಿಗಳು. ನಾವು ಮಾತನಾಡಬೇಕು.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಮುಗಿಸಲಿ ಆಮೇಲೆ ನೀವು ಮಾತನಾಡಿ, ಅವರೂ ಮಾತನಾಡಲಿ.

ಶ್ರೀ ಬಿ.ಆರ್.ನೀಲಕಂಠಪ್ಪ:- ನಾವು ೧೫೦ ಜನ ಸದಸ್ಯರಿದ್ದೇವೆ. ನಮಗೆ ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಒಂದು ನಿಮಿಷದಲ್ಲಿ ಮುಗಿಸುತ್ತಾರೆ.

ಶ್ರೀ ಎಸ್.ಸಂಪಂಗಿ:- ನಮ್ಮ ಶಾಸಕರ ಮೇಲೆ ಬಹಳ ದೌರ್ಜನ್ಯ ನಡೆಯುತ್ತಿದೆ. ನಾವು ಸ್ವತಂತ್ರವಾಗಿ ಅಯ್ಕೆಯಾಗಿ ಬಂದಿರತಕ್ಕವರು. ನಮಗೆ ಸದನದಲ್ಲಿ ಮಾತನಾಡಲು ಅವಕಾಶ ಕೊಡುತ್ತಿಲ್ಲ. ನಮಗೆ ರೈತರ ಸಮಸ್ಯೆ, ನೀರಿನ ಸಮಸ್ಯೆ ಇನ್ನೂ ಗಂಭೀರವಾದ ಹಲವಾರು ವಿಚಾರಗಳು ಮಾತನಾಡುವುದಿದೆ. ಆದರೆ ಅವರು ಅದಕ್ಕೆ ಅವಕಾಶವನ್ನೇ ಕೊಡುತ್ತಿಲ್ಲ. ಕೇಂದ್ರ ಸರ್ಕಾರದಲ್ಲಿ ಸದನದ ಬಾವಿಗೆ ಸದಸ್ಯರು ಬರಬಾರದೆಂದು ಕಾನೂನಿಗೆ ತಿದ್ದುಪಡಿ ಮಾಡಿದ್ದರೂ ಇವರು ಬಾವಿಗೆ ಬರುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಸಂಪಂಗಿಯವರೆ, ತಾವು ಮಾತನಾಡಿ.

ಶ್ರೀ ಎಸ್.ಸಂಪಂಗಿ:- ಮಾನ್ಯ ಅಧ್ಯಕ್ಷರೆ, ನಾವು ವಿಧಾನಸಭೆಯಲ್ಲಿ ಚರ್ಚೆ ಮಾಡಬೇಕಾಗಿರುವ ವಿಚಾರಗಳು ಬಹಳ ಇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಯಲ್ಲಿ ಕುಳಿತು ಮಾತನಾಡುತ್ತಿದ್ದರು.)

Mr.SPEAKER:- You can't talk like that from that place.....

(ಗೊಂದಲ)

ಅಧ್ಯಕ್ಷರು:- ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ತಾವು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ, ಬಾವಿಯಲ್ಲಿ ಕುಳಿತು ಮಾತನಾಡಬೇಡಿ. Please hear me. I have no objection.

(ಗೊಂದಲ)

ಶ್ರೀ ಬಿ.ಆರ್.ನೀಲಕಂಠಪ್ಪ:- ಇವರು ಬಾವಿಯಲ್ಲಿ ಕುಳಿತೇನು ಮಾತನಾಡುವುದು? ತೊಲಗಿಸಿ ತೊಲಗಿಸಿ ಬಿ.ಜೆ.ಪಿ.ಯನ್ನು ತೊಲಗಿಸಿ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಸಿಂಧ್ಯರವರೆ, ಮಾತನಾಡಿ.

ಶ್ರೀ ಬಿ.ಆರ್.ನೀಲಕಂಠಪ್ಪ:- ಅವರೂ ಏನೇಳುವುದಿಲ್ಲ. ಸಿಂಧ್ಯಾರವರದ್ದು ಅದೇ ರಾಗ, ನಿನ್ನೆ ಹೇಳಿದ್ದನ್ನೇ ಹೇಳುತ್ತಾರೆ. ಹೊಸ ವಿಷಯವನ್ನು ಹೇಳುವಂತೆ ಕಾಣುವುದಿಲ್ಲ.

ಅಧ್ಯಕ್ಷರು:- ಅವರು ಇನ್ನೊಂದು ವಿರೋಧ ಪಕ್ಷದ ನಾಯಕರಾಗಿದ್ದಾರೆ. ಅವರು ಮಾತನಾಡುವಾಗ ಸ್ವಲ್ಪ ಗಮನವಿಟ್ಟು ಕೇಳಬೇಕು. ನೀಲಕಂಠಪ್ಪನವರೆ, please resume your seat. ತಮಗೂ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ಬಿ.ಆರ್.ನೀಲಕಂಠಪ್ಪ:- ನಿನ್ನೆಯೆಲ್ಲಾ ಕೇಳಿಯಾಗಿದೆ.

(ಗೊಂದಲ)

ಅಧ್ಯಕ್ಷರು:- ಮಧ್ಯೆ ಮಾತನಾಡಬೇಡಿ, ಹೇಳಿದ ಮಾತನ್ನು ಸ್ವಲ್ಪ ಕೇಳಿ. ತಾವು ಕುಳಿತು ಕೊಳ್ಳುತ್ತೀರೋ ಇಲ್ಲವೋ? ಸಿಂಧ್ಯ ಅವರೇ, ನೀವು ಮಾತನಾಡಿ.

ಶ್ರೀ ಬಿ.ಆರ್.ನೀಲಕಂಠಪ್ಪ:- ಅವರಿಗೆ ಮಾತನಾಡಲು, ಪ್ರಚಾರ ಮಾಡಿಕೊಳ್ಳಲು ಬೇರೆ ಬೇರೆ ಮಾಧ್ಯಮಗಳಿದೆ. ಆದರೆ ಈ ಸದನದಲ್ಲಿ ಪ್ರಚಾರ ಮಾಡುವುದಲ್ಲ. ಸಮಯವನ್ನು ವ್ಯಯ ಮಾಡುವುದಲ್ಲ. ಬೇರೆ ವಿಷಯವನ್ನು ತೆಗೆದುಕೊಳ್ಳಿ. ಜನರು ಹೊರಗಡೆ ಸಾಯುತ್ತಿದ್ದಾರೆ. ತಾವು ಹೇಳುವುದನ್ನು ಕೇಳಲಿ, ಇಲ್ಲದಿದ್ದರೆ ಹೊರಗೆ ಹಾಕಿ, ಮತ್ತೆ ಏಕೆ ಅವರಿಗೆ ಅವಕಾಶ ಕೊಡುತ್ತೀರಿ? ಅವರಿಗೆ ಪ್ರಚಾರಕ್ಕೇಕೆ ಈ ಸದನ ಬೇಕು? ಅದಕ್ಕೆ ಬೇರೆ ಬೇರೆ ಮಾಧ್ಯಮಗಳಿವೆ.

(ಗೊಂದಲ)

ಅಧ್ಯಕ್ಷರು ತಮಗೂ ಮಾತನಾಡಲು ನಾನು ಸಮಯ ಕೊಡುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ.ಆರ್.ನೀಲಕಂಠಪ್ಪ:- ಜನ ಸಾಯುತ್ತಿದ್ದಾರೆ. ಅದು ಬಿಟ್ಟು ಇದರಲ್ಲಿ ಏನೇನೂ ಇಲ್ಲ, ಮತ್ತೇಕೆ ಅವರಿಗೆ ಅವಕಾಶ ಕೊಡುತ್ತೀರಿ?

(ಗೊಂದಲ)

+ ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ):- ಮಾನ್ಯ ಅಧ್ಯಕ್ಷರೆ, ಕೇವಲ ೯ ದಿನಗಳ ಕಾಲ ನಡೆಯುವ ಅಧಿವೇಶನವಿದು. ಈ ವರ್ಷದ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಾಡಲಿಕ್ಕೆ ನಾವಿಲ್ಲಿ ಸೇರಿದ್ದೇವೆ. ಈ ಸನ್ನಿವೇಶದಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ, ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕೆನ್ನುವ ಕಳಕಳಿ

ನಮ್ಮೆಲ್ಲರಿಗೂ ಇದೆ. ಈ ಮಧ್ಯದಲ್ಲಿ ಮೊದಲನೆ ದಿನವೇ ಮಾನ್ಯ ರಾಜ್ಯಪಾಲರ ಭಾಷಣವಾದ ಮೇಲೆ ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು, ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯ ವಿತರಣೆಯಿಂದ ರೈತರಿಗೆ, ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ, ಕುಡಿಯುವ ನೀರಿನ ತೊಂದರೆ ಇದೆ, ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಹೇಳಿ ನಾವು ನಿಲುವಳಿ ಸೂಚನೆ ರೂಪದಲ್ಲಿ ತೆಗೆದುಕೊಂಡು ಬಂದಿದ್ದೆವು. ಭಾರತೀಯ ಜನತಾ ಪಕ್ಷದವರೂ ಸಹ ಇದರ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದ್ದರು. ನಂತರ, ತಾವು ಭಾಪಾ ಕಾಗದದ ವಿಚಾರದಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿರಿ. ಸರ್ಕಾರದವರು ಒಲ್ಲದ ಮನಸ್ಸಿನಿಂದ ಇದಕ್ಕೆ ಒಪ್ಪಿಗೆ ಕೊಟ್ಟಮೇಲೆ ಇದಕ್ಕೆ ತಾವು ಅವಕಾಶ ಮಾಡಿಕೊಟ್ಟಿರಿ. ಈಗ ಈ ಸದನ ಇದೇ ರೀತಿ ಮುಂದುವರಿದರೆ, ಇರುವುದು ೩ ದಿನಗಳ ಕಾಲ ಅಷ್ಟೆ; ೩೧ನೇ ತಾರೀಖು ಕಾರ್ಯಕ್ರಮಗಳ ಪಟ್ಟಿ ಪ್ರಕಾರ ಅಧಿವೇಶನ ಮುಗಿಯಬೇಕಾಗುತ್ತದೆ. ಸರ್ಕಾರದ ಕೆಲವು ಕಾನೂನುಗಳನ್ನು, ತಿದ್ದುಪಡಿಗಳನ್ನು, ಸರ್ಕಾರಿ ಕಾರ್ಯಕಲಾಪಗಳನ್ನು ಮಾಡಬೇಕೆಂದು ಹೇಳುವುದು ಸಹಜವಾಗಿದೆ. ಸರ್ಕಾರದವರು ಅನೇಕ ಆರ್ಡಿನೆನ್ಸ್ ಹೊರಡಿಸಿದ್ದಾರೆ. ಅದನ್ನೆಲ್ಲಾ ಬಿಲ್ ಫಾರಂನಲ್ಲಿ ರೀಪ್ಲೇಸ್ ಮಾಡಿ ಆಕ್ಟ್ ಮಾಡಬೇಕಾಗುತ್ತದೆ. ಈ ತರಹ ಬೇಕಾದಷ್ಟು ಕೆಲಸಗಳಿವೆ. ಈ ಸನ್ನಿವೇಶದಲ್ಲಿ ಸದನ ನಡೆಯಲು ನಾವೆಲ್ಲರೂ ಸಹಕರಿಸಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಸದಸ್ಯರ ಮೇಲೆಯೂ ಇದೆ. ಮಾನ್ಯ ಅಭಯಚಂದ್ರರವರು ಮತ್ತು ಮಾನ್ಯ ನೀಲಕಂಠಪ್ಪನವರು ಈ ವಿಚಾರದ ಬ್ಗೆನೋ ಮಾತನಾಡಬೇಕೆಂದಿದ್ದರೆ, ಅವರಿಗೂ ಅವಕಾಶ ಕೊಡಿ. ನಾನು ಈ ಸಂದರ್ಭದಲ್ಲಿ ಕೇಳುವುದಿಷ್ಟೆ, ಬಹಳ ಮುಖ್ಯವಾಗಿ, ಇದನ್ನು ಸರ್ಕಾರದವರು ಪ್ರೆಸ್ಟೀಜ್ ಇಶ್ಯೂ ಆನ್ನಾಗಿ ಮಾಡಿಕೊಳ್ಳಬಾರದು. ಮಾನ್ಯ ಖರ್ಗೆಯವರು ಈ ಸದನದ ಒಬ್ಬ ಅತ್ಯಂತ ಮೇಧಾವಿ, ಹಿರಿಯ ಸದಸ್ಯರು, ಗೃಹ ಸಚಿವರಾಗಿದ್ದಾರೆ, ಬಹಳ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಇವರು ಮನಸ್ಸಿನಲ್ಲಿರುವುದೇ ಬೇರೆ, ಇವರು ಮಾತನಾಡುತ್ತಿರುವುದೇ ಬೇರೆ. ನನಗೆ ಗೊತ್ತಿದೆ, ಈ ಪ್ರಕರಣದಲ್ಲಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಇದರ ಬಗ್ಗೆ ಇವರು ಹೊಸ ರೀಸರ್ಚ್ ಏನಾದರೂ ಮಾಡಿ ಎಕ್ಸ್-ರೇ ಮೆಷೀನ್ ಕಂಡುಹಿಡಿದಿದ್ದಾರೆಯೇ? ಮನಸ್ಸಿನಲ್ಲಿರುವುದು ಇವರಿಗೆ ಗೊತ್ತಾಗುತ್ತದೆಂದರೆ ಆ ಬಗ್ಗೆ ಯಾವುದಾದರೊಂದು ಹೊಸ ಮಠ ಸ್ಥಾಪನೆ ಮಾಡಿದರೆ, ಬಹಳ ಜನ ಬರುತ್ತಾರೆ.

ಶ್ರೀ ಕೆ.ಅಭಯಚಂದ್ರ:- ನಿಮ್ಮ ಕಾಲದಲ್ಲೇನಾದರೂ ಮಾಡಬಹುದಾಗಿತ್ತಲ್ಲವೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಾನು ವಿಫಲನಾಗಿದ್ದೇನೆ ಸ್ವಾಮಿ. ಅಭಯಚಂದ್ರರವರಿಗೆ ಕೊಡಿಸಿ ಅವರು ಸಕ್ಸೆಸ್ ಆಗುತ್ತಾರೆ. ನನ್ನದೇನೂ ತಕರಾರಿಲ್ಲ.

ಮಾನ್ಯ ಕೃಷ್ಣರವರು ನಿಮ್ಮನ್ನು ಗೃಹಮಂತ್ರಿಯನ್ನಾಗಿ ಮಾಡುವುದಾದರೆ ನಾನು ಅದನ್ನೂ ಸ್ವಾಗತಿಸುತ್ತೇನೆ. ಮೂಲಭೂತವಾಗಿರುವುದು, ತಾವು ನಮ್ಮ ರಕ್ಷಣೆಗೆ ಬರಬೇಕಾಗಿದೆ. ಈ ಸನ್ನಿವೇಶದಲ್ಲಿ ಸದನದಲ್ಲಿ ಕಾರ್ಯಕಲಾಪ ನಡೆಸಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಈ ರೀತಿ ನಾನು ಮಾತನಾಡುತ್ತಿರುವ ಸನ್ನಿವೇಶದಲ್ಲಿ ಮಾನ್ಯ ಸದಸ್ಯರು ಮಧ್ಯೆ ಮಾತನಾಡುವುದು ಸದನದ ಗೌರವಕ್ಕೆ ಚ್ಯುತಿ ಬರುತ್ತದೆ.

ಅಧ್ಯಕ್ಷರು:- ಮಾನ್ಯ ನೀಲಕಂಠಪ್ಪನವರೇ, ನಿಮಗೆ ಬೇರೆ ಟೈಂ ಕೊಡುತ್ತೇನೆ. ಆಗ ಮಾತನಾಡಿ. I am very sorry.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀಲಕಂಠಪ್ಪನವರೇ, ನೀವು ಆಮೇಲೆ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಧ್ಯ:- ನಮ್ಮ ಪಕ್ಷದ ಒಂದು ನಿರ್ಧಾರ ನಾವು ಧರಣಿ ಮಾಡಬಾರದು ಎನ್ನತಕ್ಕದ್ದು, ನಾವು ಈ ಧರಣಿ ಮಾಡಿಕೊಂಡು ಹೋದರೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಲಿಕ್ಕಾಗುವುದಿಲ್ಲ, ರೈತರ ಸಮಸ್ಯೆಗಳ ಬಗ್ಗೆ, ಬಹಳ ಪ್ರಮುಖವಾದ ಜ್ವಲಂತ ಸಮಸ್ಯೆಗಳ ಬಗ್ಗೆ ನಾವು ಚರ್ಚೆ ಮಾಡಲಿಕ್ಕೆ ಸಾಧ್ಯವಿಲ್ಲ. ಆದರೆ, ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರು ಏಕೆ ಬಹಳ ತೀವ್ರತೆಯಿಂದ ಇದ್ದಾರೆಂಬುದು ತಮಗೆ ಅರ್ಥವಾಗಿದೆ. ಅದಕ್ಕೆ ಸಾಕಷ್ಟು ಉದಾಹರಣೆಗಳಿವೆ. ನಾನು ಮಾನ್ಯ ರೋಷನ್‌ಬೇಗ್‌ರವರಿಗೆ ಹೇಳಿದೆ, ಎಲ್ಲಾ ಕ್ಯಾಬಿನೆಟ್ ಸಚಿವರಿಗೂ ಸಹ ಒಂದೊಂದು ಜವಾಬ್ದಾರಿ ಇದೆ. ಆಡಳಿತ ಪಕ್ಷದ ಗೌರವಾನ್ವಿತ ಸದಸ್ಯರಿಗೂ ಸಹ ಜವಾಬ್ದಾರಿ ಇದೆ. ಅವರ ನಾಯಕರಿಗೆ ಅವರು ಫ್ರೀಹ್ಯಾಂಡ್ ಕೊಡಬೇಕಾಗುತ್ತದೆ. ಇಂಥ ಸನ್ನಿವೇಶದಲ್ಲಿ ಚೀಫ್ ಮಿನಿಸ್ಟರ್‌ರವರನ್ನು ಅನ್‌ನೆಸಸರಿಯಾಗಿ ಎಂಬರಾಸ್ ಮಾಡಿ ರೂಲಿಂಗ್ ಪಾರ್ಟಿಯನ್ನು ಎಂಬರಾಸ್ ಮಾಡುವುದರ ಬದಲಾಗಿ, ಲಕ್ಷಾಂತರ ಜನ ಕಾರ್ಯಕರ್ತರ ತ್ಯಾಗದ ಮೇಲೆ, ಹೋರಾಟದ ಮೇಲೆ ಏನು ಕಾಂಗ್ರೆಸ್ ಪಾರ್ಟಿ ಅಧಿಕಾರಕ್ಕೆ ಬಂದಿದೆ, ಅದಕ್ಕೇಕೆ ಎಂಬರಾಸ್ ಮೆಂಟ್ ಮಾಡಬೇಕು? ಸುಮ್ಮನೆ ರಾಜೀನಾಮೆ ಕೊಟ್ಟು ೬ ತಿಂಗಳೋ, ಒಂದು ವರ್ಷವೋ ಮನೆಯಲ್ಲಿದ್ದರೆ ಆಗುವುದಿಲ್ಲವೆ ಎಂದು ಶ್ರೀ ಜಾನ್‌ರವರು ಈ ರೀತಿ ಆಪಾದನೆ ಬಂದಾಗ ರಾಜೀನಾಮೆ ಕೊಟ್ಟರು. ಈಗ ಮತ್ತೆ ಕಳಂಕರಹಿತರಾಗಿ ಒಳಗಡೆ ಬಂದಿದ್ದಾರೆ. ಅವರನ್ನು ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು. ಇದು ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಬೇಕಾದ ಬಹಳ ಪ್ರಮುಖವಾದ ವಿಚಾರ. ಈ ಪಗರಣದಲ್ಲಿ ೧೦-೧೫ ಸಾವಿರ ಕೋಟಿ

ರೂಪಾಯಿಗಳಷ್ಟು ಇನ್‌ವಾಲ್ವ್ಡ್ ಆಗಿದೆ ಎನ್ನುವುದನ್ನು ಜವಾಬ್ದಾರಿಯುತ ಪತ್ರಿಕೆಗಳಲ್ಲಿ ರಿಪೋರ್ಟ್ ಮಾಡಿರುವುದರಿಂದ, ಕೇಂದ್ರ ಸರ್ಕಾರದ ಫೈನಾನ್ಸ್ ಡಿಪಾರ್ಟ್‌ಮೆಂಟ್ ಏನಿದೆ, ಅವರು ಇಷ್ಟು ಹೊತ್ತಿಗಾಗಲೇ ಈ ವಿಚಾರದಲ್ಲಿ ಇಂಟರ್‌ವೀನ್ ಆಗಬೇಕಾಗಿತ್ತು. ಅವರು ಇಂಟರ್‌ವೀನ್ ಆಗಲಿಲ್ಲ. It is a very unfortunate thing. ಸ್ಟೇಟ್ ಗೌರ್ನಮೆಂಟ್ಸ್‌ಗಳು ಬಿಜೆಪಿಯದ್ದು ಅನೇಕ ಕಡೆಗಳಲ್ಲಿ ಅಧಿಕಾರದಲ್ಲಿದೆ. ಆದರೆ, ಅವರೂ ಸಹ ಇದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. This is also a very unfortunate thing. It is not only in Karnataka, the Congress is ruling. Congress is ruling in Maharastra. NDA ally Mr.Naidu is ruling in Andhra Pradesh. ಸಿಪಿಎಂನವರು ವೆಸ್ಟ್‌ಬೆಂಗಾಲ್‌ನಲ್ಲಿ ಅಧಿಕಾರದಲ್ಲಿದ್ದಾರೆ. ಇದು ಎಲ್ಲಾ ಕಡೆಗಳಲ್ಲಿ ಆಗಿದೆ. ಇಂಥ ಒಂದು ಜಾಲ ನಡೆಯುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಮೌನವಾಗಿದ್ದಾರೆಂದರೆ ಅದರ ಅರ್ಥವೇನು? ನನ್ನ ಅಭಿಪ್ರಾಯದಲ್ಲಿ ಅವರು ಮೌನವಾಗಿರಬಾರದು? ಇಷ್ಟೊತ್ತಿಗಾಗಲೇ ಅವರು ಕ್ರಮ ತೆಗೆದುಕೊಳ್ಳಬೇಕಾಗಿತ್ತು. It is not the business or the duty of only the Karnataka Government. It is the duty of the entire union government. They have failed according to me. Whatever it is ಈಗ ನಮ್ಮ ಮುಂದಿರುವುದು, ಸದನದ ಕಾರ್ಯಕಲಾಪಗಳನ್ನು ಹೇಗೆ ನಾವು ಸುಸೂತ್ರವಾಗಿ ನಡೆಸಬೇಕು ಎಂಬುದು. ನಮ್ಮ ವಿರೋಧ ಪಕ್ಷದ ಮಿತ್ರರು, ಬಾವಿಯಲ್ಲಿ ಧರಣಿ ಮಾಡುತ್ತಿರುವ ಸನ್ನಿವೇಶದಲ್ಲಿ ನಾವು ಇಲ್ಲಿ ಕುಳಿತು ಚರ್ಚೆಯಲ್ಲಿ ಭಾಗವಹಿಸಲಾಗುವುದಿಲ್ಲ. ನಾನು ಮತ್ತೊಮ್ಮೆ ಮುಖ್ಯ ಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ, It is very simple. ಪೊಲೀಸ್ ಆಫೀಸರ್ಸ್ ಬಗ್ಗೆ ನಾನು ಹೇಳಿದೆ, ನಿನ್ನೆ ಮೊನ್ನೆ ಸಹ ಹೇಳಿದ್ದೇನೆ. ನಮ್ಮ ಪೊಲೀಸ್ ಆಫೀಸರ್ಸ್ ಕೆಲವರು ಯಾರು ಇದ್ದಾರೆ, ಅವರ integrity, it is beyond question. ತಾವು ಹೇಳುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈಗ ಒಬ್ಬ ಸ್ಟೇಟ್ ಗೌರ್ನಮೆಂಟ್ ಮಿನಿಸ್ಟರ್ ಮೇಲೆ ಆಪಾದನೆ ಬಂದಿರತಕ್ಕಂಥ ಸನ್ನಿವೇಶದಲ್ಲಿ, ಯಾವುದೇ ಒಂದು ಎನ್‌ಕ್ವೈರಿ ಮಾಡುವ ಸನ್ನಿವೇಶದಲ್ಲಿ ನಾವು ಟರ್ಮ್ಸ್ ಆಫ್ ರೆಫರೆನ್ಸ್ ಎಂದು ಕೊಡುತ್ತೇವೆ. ಆಫೀಸರ್ಸ್‌ಗಳಿಗೆ ಇಂಡಿಕೇಷನ್ಸ್ ಕೊಟ್ಟಿರುತ್ತೇವೆ. ಅನ್‌ಫಾರ್ಚುನೇಟ್ಲಿ ರೋಷನ್ ಬೇಗ್‌ರವರು ೨-೩ ವರ್ಷಗಳ ಕಾಲ ಹೋಂ ಮಿನಿಸ್ಟರ್ ಆಗಿದ್ದರು. ಕಳ ಹಂತದಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್, ಸಬ್-ಇನ್ಸ್‌ಪೆಕ್ಟರ್, ಸಾಕ್ಷಿ ಆಧಾರಗಳು ಮತ್ತೊಂದಕ್ಕೆ ಅವರ ಕಾಂಟಾಕ್ಟ್ಸ್ ಇರುತ್ತವೆ. ಅವರು ಆ ರೀತಿಯಾಗಿ ಇನ್‌ಫ್ಲೂಯೆನ್ಸ್ ಮಾಡುತ್ತಾರೆನ್ನುವುದೇ ನಮ್ಮ ಆಪಾದನೆಯಾಗಿರುವುದು. ಅದಕ್ಕೋಸ್ಕರ ನೀವು ಇದನ್ನು ಸಿ.ಬಿ.ಐ.ಗೆ ವಹಿಸಿ. ಶ್ರೀ ಕುಮಾರ್‌ರವರು ಹಿಂದೆ ಸಿ.ಬಿ.ಐ.ನಲ್ಲಿದ್ದರು. ಮತ್ತೆ

ಅವರು ಅಲ್ಲಿಗೆ ಹೋಗುವ ಸಂಭವವಿದೆ. ಆದ್ದರಿಂದ ಶ್ರೀ ಕುಮಾರ್ ಬಗ್ಗೆ ನಾವು ಯಾರೂ ಆಪಾದನೆಗಳನ್ನು ಮಾಡುತ್ತಿಲ್ಲ. ಅವರು ಒಳ್ಳೆಯವರು, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಪೊಲೀಸ್ ಇವರನ್ನು ಅರೆಸ್ಟ್ ಮಾಡಿ, ಇಷ್ಟರಮಟ್ಟಿಗೆ ಮಾಡಿರುವುದನ್ನು ನಾನು ಅಪ್ರೀಷಿಯೇಟ್ ಮಾಡುತ್ತಿದ್ದೇನೆ. ನೀವು ಇದನ್ನು ಏಕೆ ಸಿ.ಬಿ.ಐ.ಗೆ. ವಹಿಸಬೇಕೆಂಬುದಕ್ಕೆ ಉದಾಹರಣೆ ಹೇಳುವುದಾದರೆ, ರಶೀದ್‌ರವರ ಮರ್ಡರ್ ಕೇಸ್‌ನಲ್ಲಿ ಅನ್‌ಫಾರ್ಚುನೇಟ್ಲಿ ಕೆ.ನಾರಾಯಣ್, ಐಪಿಎಸ್ ಆಫೀಸರ್ ಮೇಲೆ ಆಪಾದನೆ ಇತ್ತು. ಅದಕ್ಕೋಸ್ಕರ ಶ್ರೀ ರಾಮಕೃಷ್ಣ ಹೆಗಡೆಯವರು ಜಾಲಪ್ಪನವರನ್ನು ಕರೆಸಿ ಕೇಳಿದಾಗ, ಜಾಲಪ್ಪನವರು ಇನ್ನೋಸೆಂಟ್, ಅವರು ನನಗೇನೂ ಗೊತ್ತಿಲ್ಲ ಸಿಬಿಐಗೆ ಅಲ್ಲ, ದೇವರಿಗೇ ಕೊಡಿ ಎಂದರು. ತಕ್ಷಣ ಸಿಬಿಐಗೆ ವಹಿಸಿದರು. ಆ ರೀತಿ ಮಾಡಬಹುದು. ನೀವು ರಾಜ್ಯ ಸರ್ಕಾರದ ಕೆಲವು ಕೆಳ ಮಟ್ಟದ ಅಧಿಕಾರಿಗಳ ಮೇಲೆ, ರಾಜ್ಯ ಸರ್ಕಾರದ ಒಬ್ಬ ಮಂತ್ರಿಯ ಮೇಲೆ ಆಪಾದನೆ ಇರುವ ಸನ್ನಿವೇಶದಲ್ಲಿ ನಾವೇ ಅದನ್ನೂ ಸಹಿತ ತನಿಖೆ ಮಾಡುತ್ತೇವೆಂದು ಹೇಳಿದರೆ ಹೇಗಾಗುತ್ತದೆ? ಆದುದರಿಂದ, ಇದನ್ನು ಸಿಬಿಐಗೆ ವಹಿಸಿ. ಅದಾಗುವುದಿಲ್ಲವೆಂದರೆ, ರೋಷನ್ ಬೇಗ್‌ರವರು ನಾಯಕರಿಗೆ ಅತ್ಯಂತ ಗೌರವದಿಂದ ಇದ್ದಾರೆ. ಆ ಕಾರಣ, ಮಾನ್ಯ ಕೃಷ್ಣರವರು ಮೌನವಾಗಿದ್ದಾರೆ. ಅದನ್ನು ಮುರಿಯಲು ಆಗುತ್ತಿಲ್ಲ. ಬಹಳ ಕಷ್ಟಪಟ್ಟು, ನನ್ನ ಮೇಲೆ ಮಾನಸಿಕವಾಗಿ ಯಾವುದೇ ರೀತಿ ಚಿತ್ರಹಿಂಸೆ ಇಲ್ಲ ಎನ್ನುವುದನ್ನು ಬಿಟ್ಟರೆ ಉಳಿದಂತೆ ಯಾವುದೇ ಸ್ಟೇಟ್‌ಮೆಂಟ್ ಅನ್ನು ಅವರು ಕೊಡುವುದಕ್ಕೆ ಆಗಿಲ್ಲ. ಕೊಡುವುದಕ್ಕೆ ಆಗುವುದೂ ಇಲ್ಲ. He is under lot of pressure. ಶ್ರೀ ಅಜೀಜ್‌ಸೇಠ್‌ರವರು ಈ ಸದನ ಕಂಡಂಥ ಒಬ್ಬ ಅತ್ಯಂತ ಹಿರಿಯ, ಮೇಧಾವಿ ಸದಸ್ಯರಾಗಿದ್ದರು. ಎಮರ್‌ಜೆನ್ಸಿಯಲ್ಲಿ ನಾವೆಲ್ಲಾ ಜೈಲಿನಲ್ಲಿದ್ದೆವು. ಅವರು ಆ ಸಂದರ್ಭದಲ್ಲಿ ಕೇರಳಕ್ಕೆ ಹೋಗಿದ್ದಾಗ, ಯಾರೋ ಒಬ್ಬ ಸ್ಮಗ್ಲರ್ ಅನ್ನು ಭೇಟಿ ಮಾಡಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿ ಬಂತು. The Congress high-command intervene and they said 'Azeez Sait should resign.' ಅಜೀಜ್ ಸೇಠ್‌ರವರು ಸಚಿವ ಸಂಪುಟದಿಂದ ಆ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟರು. ಇಂಥ ಅನೇಕ ಉದಾಹರಣೆಗಳಿವೆ. ಆದುದರಿಂದ, ನಾನು ತಮ್ಮನ್ನು ಕೇಳುತ್ತಿದ್ದೇನೆ, ತಾವು ಸದನವನ್ನು ಮುಂದೂಡಿ, ಮುಖ್ಯಮಂತ್ರಿಗಳನ್ನು ಗೃಹ ಸಚಿವರನ್ನು ಕರೆಸಿ, ಇದನ್ನು ಬಗೆಹರಿಸಬೇಕು. ಈ ರೀತಿ ಸದನ ನಡೆದರೆ ನಮ್ಮ ಕರ್ನಾಟಕ ವಿಧಾನಸಭೆಯ ಸಂಸ್ಕೃತಿ, ಪರಂಪರೆ ಹಿನ್ನೆಲೆಗೆ ಅಷ್ಟು ಶೋಭಾಯಮಾನವಾಗಿ ಕಾಣುವುದಿಲ್ಲ. ತಾವು ಸದನವನ್ನು ಮುಂದೂಡಿ, ಇದೇ ರೀತಿ ಇದ್ದರೆ ನಮ್ಮ ಪ್ರತಿಭಟನೆಯನ್ನು ನಾವು ಮುಂದುವರೆಸಬೇಕಾಗುತ್ತದೆ. ಉಪಯೋಗವಾಗುವುದಿಲ್ಲ. We have convinced beyond doubt. ಏನೋ ರಾಜಕಾರಣದಲ್ಲಿ ಬೆನಿಫಿಟ್ ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ನಾವು ಇದನ್ನು

ಮಾಡುತ್ತಿಲ್ಲ. ಇದರಿಂದ ಹೆಚ್ಚಿನ ಬೆನಿಫಿಟ್ ಯಾರಿಗೂ ಆಗುವುದಿಲ್ಲ. ಈ ಇಮ್ಮೀಡಿಯೇಟ್ ಚುನಾವಣೆಗಳಲ್ಲಿ ಬಿಜೆಪಿಯವರೂ ನಮ್ಮ ವಿರೋಧಿಗಳೇ, ಅವರೂ ನಮ್ಮ ವಿರೋಧಿಗಳೇ. ಆದರಿಂದಾಗಿ ಇಲ್ಲಿ ಯಾರಿಗೂ ಬೆನಿಫಿಟ್ ಸಿಗುವುದಿಲ್ಲ. ಬೆನಿಫಿಟ್ ಏನಾದರೂ ಸಿಗುವುದಿದ್ದರೆ ಕಾಂಗ್ರೆಸ್‌ನವರಿಗೇ. ಹೇಗೆಂದರೆ, ಇವರು ಏನೂ ಇನ್‌ವಾಲ್ವ್ ಆಗಿಲ್ಲ ಅದಕ್ಕೋಸ್ಕರ ರಾಜೀನಾಮೆ ಕೊಟ್ಟರು, ಅದಕ್ಕೋಸ್ಕರ ಸಿಬಿಐಗೆ ವಹಿಸಿದರೆಂದು ಹೇಳಿ, they will come out in better colours. ಅದಕ್ಕೋಸ್ಕರ ಮತ್ತೊಮ್ಮೆ ನಾನು ಅಪೀಲ್ ಮಾಡುತ್ತಿದ್ದೇನೆ, ತಾವು ದಯವಿಟ್ಟು ಸದನವನ್ನು ಮುಂದೂಡಿ, ಇದನ್ನು ಮಾತುಕತೆ ಮೂಲಕ ಬಗೆಹರಿಸಬೇಕು. ಇಂಥ ಅನೇಕ ಸಂದರ್ಭಗಳಲ್ಲಿ ಈ ರೀತಿ ಮಾಡಿ ತಾವು ಯಶಸ್ವಿಯಾಗಿದ್ದೀರಿ. ಇನ್ನೊಮ್ಮೆ ಆ ರೀತಿ ಆಗಬೇಕೆಂಬುದು ನನ್ನ ಕಳಕಳಿಯ ಮನವಿ.

೧೦.೩೦ ಎಎಂ

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಸ್ವಲ್ಪ ರೆಕಾರ್ಡ್ ಸರಿಯಿರಲಿ ಎಂದು ಹೇಳಲಿಚ್ಚಿಸುತ್ತೇನೆ. ಮಾನ್ಯ ಅಜೀಜ್‌ಸೇಠ್‌ರವರು ತುರ್ತು ಪರಿಸ್ಥಿತಿಯಲ್ಲಿ ಮಂತ್ರಿ ಸ್ಥಾನ ಬಿಡಲಿಲ್ಲ, ಏಕೆಂದರೆ, he was in congress. ಮಾನ್ಯ ಅಜೀಜ್‌ಸೇಠ್‌ರವರು ೧೯೭೨ರಿಂದ ೧೯೭೮ರವರೆಗೆ ಕಾಂಗ್ರೆಸನಲ್ಲಿದ್ದರು, ೧೯೭೮ರ ನಂತರ ಮಧ್ಯದಲ್ಲಿ ಸ್ವಲ್ಪ ಪಕ್ಷ ಬಿಟ್ಟರು ಅವರು ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿನಲ್ಲಿ ಇರಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ನಾನು ಹೇಳಿದ್ದು ಏನೆಂದರೆ, ನಾನು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜೈಲ್‌ನಲ್ಲಿದ್ದೆ, ಮಾನ್ಯ ಅಜೀಜ್‌ಸೇಠ್‌ರವರು ಕಾಂಗ್ರೆಸ್ ಪಕ್ಷದಲ್ಲಿದ್ದವರು, ಮಂತ್ರಿಗಳಾಗಿದ್ದರು, ಅವರು as a Minister ಕೇರಳಕ್ಕೆ ಹೋದಾಗ ಹಾಜಿ ಮಸ್ತಾನರವರನ್ನು ಭೇಟಿ ಮಾಡಿದರು ಎಂದು ಪತ್ರಿಕೆಯಲ್ಲಿ ಬಂತು, Immediate ಆಗಿ High-command intervened and they asked him to resign and he resigned. ಒಬ್ಬ ಹಾಜಿ ಮಸ್ತಾನನ್ನು ಭೇಟಿ ಮಾಡುವುದೇ ತಪ್ಪು ಎನ್ನುವುದಾದಲ್ಲಿ, ಕರೀಂಲಾಲ್ ಎನ್ನುವಂಥ ಒಬ್ಬ ಮನುಷ್ಯ ಮಂತ್ರಿಗಳ ಸಹೋದರರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದಾನೆಂದರೆ, ಇದು ಸರಿಯೇ ತಪ್ಪೆ ಎಂಬುದರ ಬಗ್ಗೆ ಆಡಳಿತ ಪಕ್ಷದ ಸದಸ್ಯರು ಸಿಎಲ್‌ಪಿ ಸಭೆ ಕರೆದು ಯೋಚನೆ ಮಾಡಿರಿ. ಖಂಡಿತವಾಗಿ ಇದು ನಿಮಗೆ ಗೌರವ ತರುವುದಿಲ್ಲ. ಆದ್ದರಿಂದ, ತಾವು ದಯಮಾಡಿ ಸಭೆಯನ್ನು ಮುಂದೂಡಿ, ಇದೇ ರೀತಿಯಾದರೆ ನಮ್ಮ ಪ್ರತಿಭಟನೆ ಮುಂದುವರಿಯುತ್ತದೆ, ನಾವು ಈಗಾಗಲೇ ಸಭಾತ್ಯಾಗ ಮಾಡಿದ್ದೇವೆ. ಆದರೂ ನಮ್ಮ ಪಕ್ಷದ ನಿಲುವು ಏನು ಎಂಬುದನ್ನು ಹೇಳಬೇಕೆಂದು ನಾನು ಒಳಗಡೆ ಬಂದಿದ್ದೇನೆ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು):- ನಾನು ಅನೇಕ ಸಲ ಹೇಳಿದ್ದೇನೆ. ಈಗಾಗಲೇ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದು, ಆಡಿಷನಲ್ ಡಿಜಿಪಿ.ಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಅವರ ನೇತೃತ್ವದಲ್ಲಿ ತನಿಖೆಯನ್ನು ಮಾಡಬೇಕು ಎನ್ನುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಅವರು ತನಿಖೆಯನ್ನು ಮಾಡುತ್ತಿದ್ದಾರೆ, ಅದರಲ್ಲಿ ಏನಾದರೂ ಹೊಸ ವ್ಯಾಖ್ಯಾನ ಅಥವಾ ಹೊಸ ಎವಿಡೆನ್ಸ್ ಬಂದರೆ ಮತ್ತೆ ಆಡಿಷನಲ್ ಚಾರ್ಜ್ ಷೀಟ್ ಹಾಕುವುದಕ್ಕೆ ಅವಕಾಶವಿದೆ. ಅದರಲ್ಲಿ ಏನೂ ಮುಚ್ಚುತಕ್ಕಂಥ ಪ್ರಶ್ನೆಯಿಲ್ಲ. ಎಫ್ಐಆರ್ ನಲ್ಲಾಗಲಿ, ಚಾರ್ಜ್‌ಷೀಟ್‌ನಲ್ಲಾಗಲಿ, ಎಲ್ಲಾದರೂ ಒಂದು ಕಡೆ ಇದ್ದರೆ, ನೀವೂ ಕೂಡ ನೋಡಿ ಈ ರೀತಿ ಇಟ್ಟುಕೊಂಡು ಹೇಗೆ ಇದ್ದೀರಿ ಎಂದು ಹೇಳಬಹುದಾಗಿತ್ತು. ಆದರೆ ಈಗ ಅವರ ಬ್ರದರ್ ಇದ್ದಾರೆ, ಅವರು ಇದ್ದಾರೆ ಅದಕ್ಕಾಗಿ ನಿಮಗೆ ಸಂಶಯ ಬರುತ್ತಿದೆ ಎನ್ನುವ ಮಾತನ್ನು ಹೇಳಿ, ಈಗ ಪೊಲೀಸರ ಮೇಲೆ ಹೇಳುವುದು. ಏಕೆಂದರೆ, ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ಮಾಡುವುದಕ್ಕೆ ಆಗುವುದಿಲ್ಲ, ಅವರು ಅನ್‌ಫಾರ್ಚುನೇಟ್ಲಿ ನಿಮ್ಮ ಕಾಲದಲ್ಲಿ ಗೃಹ ಸಚಿವರು ಆಗಿದ್ದರು, ಅದಕ್ಕೆ ಅವರ ಮಾತು ಕೇಳುತ್ತಾರೆಂದು ತಾವು ಪ್ರಸ್ತಾಪಿಸಿದಿರಿ. ನಾವು ಕೆಲವು ಸಲ ಯಾವ ಸಂಸ್ಥೆಗೆ ಇನ್ವೆಸ್ಟಿಗೇಷನ್ ಮಾಡಲಿಕ್ಕೆ ಒಪ್ಪಿಸುತ್ತೇವೆ ಅವರ ಮೇಲೆ ನಾವು ನಂಬಿಕೆ ಇಡಬೇಕಾಗುತ್ತದೆ, ಆ ನಂಬಿಕೆ ಅವರಿಗೂ ಕೂಡ ಇದೆ ಎಂದು ನಾನು ತಿಳಿದಿದ್ದು, ಅವರೂ ಅನೇಕ ಸಾರಿ ಇದನ್ನು ಪ್ರತಿಪಾದಿಸಿದ್ದಾರೆ. ರಾಜ್ಯದಲ್ಲಿ ಸ್ಟೇಟ್ ಮಿನಿಸ್ಟರ್ ಇನ್‌ವಾಲ್ವ್ ಆದರೆ ಈ ಪೊಲೀಸರ ಮೇಲೆ ಪ್ರಭಾವ ಬೀರಬಹುದೆಂದು ಅವರು ಹೇಳಿದರು, ಸಿಬಿಐ ದಲ್ಲಿ ಸೆಂಟ್ರಲ್ ಮಿನಿಸ್ಟರ್ ಇದ್ದರೆ ಪ್ರಭಾವ ಬೀರುವುದಕ್ಕೆ ಆಗುವುದಿಲ್ಲವೆ? ಅಲ್ಲಿ ಯಾರಿಗೆ ಹೇಳಬೇಕು?..... ಇದೇ ಕೇಸ್ ಎಂದು ನಾನು ಹೇಳುತ್ತಿಲ್ಲ ಯಾವುದಾದರೂ ಆಗಬಹುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವರು ಸುತ್ತಿ ಬಳಸಿ ಏಕೆ ಮಾತನಾಡುತ್ತಿದ್ದಾರೆ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಹಿಂದೆ ಪ್ರಧಾನ ಮಂತ್ರಿ ಹಾಗೂ ಮಂತ್ರಿಗಳ ಮೇಲೆ ಆಪಾದನೆ ಬಂದಾಗ ಸಿಬಿಐ ನವರು ತನಿಖೆ ಮಾಡಿದ್ದರು. ಸಿಬಿಐ ಮೇಲೆ ಸೆಂಟ್ರಲ್ ಗೌರ್ಮೆಂಟ್ ಮಿನಿಸ್ಟರ್ ಪ್ರಭಾವ ಬೀರುತ್ತಾರೆ, ಅದಕ್ಕಾಗಿ ಅದು ಬೇಡವೇ ಬೇಡ, ಬೇರೆ ಯಾವುದಾದರೂ ಒಂದು ಏಜೆನ್ಸಿ ಹುಡುಕೋಣ ಎಂದು ಹೇಳುವುದಕ್ಕಾಗುತ್ತದೆಯೇ? ಯಾವುದೇ ಸರ್ಕಾರವಿದ್ದರೂ ಕೂಡ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ತನಿಖೆ ಮಾಡುವಾಗ ನಾವು ನಂಬಬೇಕಾಗುತ್ತದೆ, ಇದೊಂದು ನಂಬಿಕೆ ಪ್ರಶ್ನೆ. ನಿಮಗೆ ಅವರಲ್ಲಿ ನಂಬಿಕೆ, ವಿಶ್ವಾಸ, ಇಲ್ಲವೆಂದರೆ ಆ ಮಾತು ಬೇರೆ. ಪ್ರಜಾಪ್ರಭುತ್ವದ ನಡವಳಿಕೆಯಲ್ಲಿ ಏಕೈಕವಾಗಿ ನಾವು ಯಾರಿಗೆ ಅಧಿಕಾರವನ್ನು

ಕೊಡುತ್ತೇವೆ ಅವರ ಮೇಲೆ ನಂಬಿಕೆ ಇಡಬೇಕಾಗುತ್ತದೆ ಮತ್ತು ಅವರು ಈ ಒಂದು ವಿಚಾರಣೆಯನ್ನು ನಿಷ್ಪಕ್ಷಪಾತವಾಗಿ ಮಾಡುತ್ತಾರೆ ಎನ್ನುವ ದೃಷ್ಟಿಯಿಂದಲೇ ನಾವು ಹೋಗಬೇಕಾಗತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ತಾತ್ಕಾಲಿಕವಾಗಿ ತಾವು ಈಗ ಸಭಾನಾಯಕರು ಆಗಿರುವುದರಿಂದ ನಾನು ಈ ಮಾತನ್ನು ತಮಗೆ ಹೇಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಅವರು ಬರುತ್ತಾರೆ, ನಿನ್ನೆ ಹೀಗೆ ಮಾಡಿ ಮೌನ ಮುರಿಸಿದಿರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಅವರು ಮೌನ ಯಾವ' ತರಹ ಮುರಿದರು ಎಂದರೆ, ಸಿಂಧ್ಯಾರವರು ಹೇಳಿದರು ಎಂದು ಹೇಳಲಿಲ್ಲ ಮಾನ್ಯ ಸೋಮಶೇಖರ್‌ರವರದ್ದು ಕನ್‌ವೀನಿಯೆಂಟ್ ಆಗಿತ್ತು ಎಂದು ಹೇಳಿಬಿಟ್ಟು ಸೋಮಶೇಖರ್‌ರವರ ಕಾಲದಲ್ಲಿ ಅಗಿರತಕ್ಕ ರೀಫಾರ್ಮ್ಸ್ ಅನ್ನು ಅಪ್ರೀಷಿಯೇಟ್ ಮಾಡಿ, ನಾನು ಯಾವುದೇ ಟೆನ್‌ಷನ್‌ನಲ್ಲಿ ಇಲ್ಲವೆಂದು ಪಾಪ ಅವರು ತೋರಿಸಿಕೊಂಡರು. ನನಗೆ ಸಂತೋಷ, ಮಾನ್ಯ ಮುಖ್ಯಮಂತ್ರಿಗಳು ಟೆನ್‌ಷನ್‌ನಲ್ಲಿ ಇರುವುದು ಬೇಡ.

ಶ್ರೀ ವೈ.ಕೆ.ರಾಮಯ್ಯ:- ಅಧ್ಯಕ್ಷರೆ,

ಅಧ್ಯಕ್ಷರು:- ರಾಮಯ್ಯನವರೇ ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ವೈ.ಕೆ.ರಾಮಯ್ಯ:- ಯಾವಾಗಲೋ ಕೊಟ್ಟರೆ ಆಗುವುದಿಲ್ಲ ಈಗಲೇ ಕೊಡಿ, ಇಲ್ಲಾ ಊರಿಗೆ ಕಳುಹಿಸಿ.

ಅಧ್ಯಕ್ಷರು:- ಈಗಲೇ ಕೊಡುತ್ತೇನೆ, ಅವರದ್ದು ಆದ ತಕ್ಷಣ ನಂತರ ಕೆಂಡೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಈಗ ಎನ್‌ಕ್ವೈರಿ ನಡೆಯುತ್ತಿದೆ, ಇಂಥ ಸಂದರ್ಭದಲ್ಲಿ ಮಂತ್ರಿಗಳ Brother is one of the [xx] ಇದ್ದಾರೆ, ಇಂಥ ಸನ್ನಿವೇಶದಲ್ಲಿ ಅವರು ಪವರ್‌ನಲ್ಲಿ ಮುಂದುವರಿಯಬಾರದು. If the same is logic to 'X', 'X' was not in power and the allegation is not proved, it is under enquiry. Why did you ask him to resign? Why he resigned? He was in an important position in Karnataka. Why he resigned? He was the President of your party. The allegations have not been proved. Why did you not continue him as the Congress

[xx] ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

President? The same thing applies here also. ಅವರು ಮಾತ್ರ ಒಂದು ಆಪಾದನೆ ಬಂದತಕ್ಷಣ, ಏಕೆ? Is there any conspiracy behind that? We would like to know about it. ಇಲ್ಲಿರುವ ಅಕ್ಯೂಜ್ಡ್ ನಾನು ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇನೆ ಎಂದು ಹೇಳಿದ್ದಾನೆ. ಇವರು ಮನೆಯನ್ನು ಬಾಡಿಗೆಗೆ ಫ್ರೀಯಾಗಿ ಕೊಟ್ಟಿದ್ದೇನೆಂದು ಹೇಳಿದ್ದಾರೆ, ಯಾರು ಈ ಕಾಲದಲ್ಲಿ ಮನೆಯನ್ನು ಬಾಡಿಗೆಗೆ ಫ್ರೀಯಾಗಿ ಕೊಡುತ್ತಾರೆ? ಯಾವ ಪುರುಷಾರ್ಥಕ್ಕೆ ಫ್ರೀಯಾಗಿ ಕೊಡುತ್ತಾರೆ ಮನೆಯನ್ನು? ಇದೆಲ್ಲಾ ಇಟ್ಟುಕೊಂಡು ನೀವು ಹೈಡ್ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದೀರಾ? ಕಾಂಗ್ರೆಸ್ ಅಧ್ಯಕ್ಷರುಗೊಂದು ಯಾರ್ಡ್‌ಸ್ಟಿಕ್, ಈ ಸ್ಕ್ಯಾಂಡಲ್‌ನಲ್ಲಿರತಕ್ಕಂಥ ಮಿನಿಸ್ಟರ್‌ರವರಿಗೆ ಒಂದು ಯಾರ್ಡ್‌ಸ್ಟಿಕ್? Why don't you have one yardstic? This has to be debated in the Congress party also.

(ಗೊಂದಲ)

ಅಧ್ಯಕ್ಷರು:- ನಿಮ್ಮ ನಾಯಕರು ಮಾತನಾಡುವಾಗ ಅವಕಾಶ ಕೊಡಬೇಕು, ಅವರು ಮಾತನಾಡುವಾಗ ಅವಕಾಶ ಕೊಡಬಾರದೆ? ರಾಮಯ್ಯನವರೇ ನೀವು ಮಾತನಾಡಿ.... ಒಂದು ನಿಮಿಷ ಮಾನ್ಯ ಚಂದ್ರೇಗೌಡರವರು ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು:- ನೋಡಿ ನೀವು ಈ ರೀತಿ ಮಾಡಿದರೆ ನಾಳೆ ನಿಮ್ಮ ನಾಯಕರು ಮಾತನಾಡುವಾಗ ಅವಕಾಶ ಕೊಡುವುದಿಲ್ಲ ಮಂತ್ರಿಗಳು ಏನು ಹೇಳುತ್ತಿದ್ದಾರೆ ಮೊದಲು ಕೇಳಿ.

Sri D.B.Chandregowda(Minister for Law and Parliamentary a affairs):- I want to correct the records. ಮಾನ್ಯ ಸಿಂಧ್ಯಾರವರು ಏನು ಹೇಳಿದರು that should be proved. 'Minister is an [X] you said 'Minister is an [X]. ಆದರೆ 'Minister cannot be an [X].

MR.SPEAKER:- 'Minister is an X' ಎನ್ನುವುದನ್ನು ತೆಗೆದು ಹಾಕಿ. ಮಾನ್ಯ ರಾಮಯ್ಯನವರೇ ಮಾತನಾಡಿ.

SRI P.G.R.SINDHYA:- I repeat the Minister is [X] from our point of view.

[X] ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

(ಗೊಂದಲ)

ಅಧ್ಯಕ್ಷರು:- ನಾನು ಎದ್ದು ಮಾತನಾಡುವ ಸಂದರ್ಭದಲ್ಲಿ ನೀವು ಹೀಗೆ ಮಾಡಿದರೆ ಹೇಗೆ ನಮಗೆ ಗೌರವ ಬೇಡವೆ? Please keep quite. ದಯವಿಟ್ಟು ಸ್ವಲ್ಪ ಮೌನವಾಗಿರಿ. ಈ ವಿಷಯದ ಬಗ್ಗೆ ಇರತಕ್ಕ ಸಮಸ್ಯೆಯನ್ನು ನಾವು ಯಾವುದಾದರೊಂದು ರೀತಿಯಲ್ಲಿ ಬಗೆಹರಿಸಬೇಕಾಗುತ್ತದೆ. ಆದ್ದರಿಂದ ಸದರಿ ವಿಷಯದ ಬಗ್ಗೆ ಚರ್ಚೆ ಮಾಡಲು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಮಾನ್ಯ ಡಿ.ಬಿ.ಚಂದ್ರೇಗೌಡರು ಹಾಗೂ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಮಾನ್ಯ ಸಿಂಧ್ಯರವರು ಬರಬೇಕು. ಈಗ ಅರ್ಧ ಗಂಟೆ ಕಾಲ ಸದನವನ್ನು ಮುಂದೂಡುತ್ತೇನೆ.

(ಸದನವು ೧೧ ಗಂಟೆ ೪೧ ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಅರ್ಧ ಗಂಟೆ ನಂತರ ಸಭೆ ಸೇರಲು ನಿಶ್ಚಯಿಸಿತು)

(ಸದನವು ಮತ್ತೆ ಮಧ್ಯಾಹ್ನ ೧೨-೩೫ಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಅಧ್ಯಕ್ಷರು ಶ್ರೀ ಎಂ.ಪಿ.ಪೆಂಕಟಪ್ಪನವರು ಪೀಠವನ್ನು ಅಲಂಕರಿಸಿದ್ದರು)

(ಭಾರತೀಯ ಜನತಾ ಪಕ್ಷದ ಸದಸ್ಯರು ಬಾವಿಯಲ್ಲಿ ಧರಣಿ ಹೂಡಿದ್ದರು)

ಶ್ರೀ ಎನ್.ಸಂಪಂಗಿ(ಜಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ನಾವು ಸ್ವತಂತ್ರವಾಗಿ ಆಯ್ಕೆಯಾಗಿ ಬಂದಿದ್ದೇವೆ. ಸದನದಲ್ಲಿ ಏನಾದರೂ ಚರ್ಚೆಯಾಗಬೇಕು, ರೈತರ ಸಮಸ್ಯೆಗಳು ಪರಿಹಾರವಾಗಬೇಕು ಎನ್ನುತಕ್ಕ ವಿಚಾರದಿಂದ ಇಲ್ಲಿಗೆ ಬಂದಿದ್ದೇವೆ.

ಹಾಗಿರುವಾಗ ನಮಗೆ ಇವತ್ತು ಮಾತನಾಡಲು ಅವಕಾಶವನ್ನೇ ಕೊಡದಿದ್ದರೆ ನಮ್ಮ ಜನರಿಗೆ ಯಾವ ರೀತಿಯಲ್ಲಿ ನಾವು ಉತ್ತರ ಹೇಳಬೇಕಾಗುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಇಲ್ಲಿ ವಿಷಯಗಳ ಚರ್ಚೆಯಾಗಬೇಕು, ನಮ್ಮ ಜನರ ಸಮಸ್ಯೆಗಳು ಪರಿಹಾರವಾಗಬೇಕು ಎಂಬ ಆಸೆಯಿಂದ ಸದನಕ್ಕೆ ನಾವು ಬಂದಿದ್ದೇವೆ. ಆದರೆ ಇಲ್ಲಿ ಚರ್ಚೆಯೇ ಆಗುತ್ತಿಲ್ಲ. ನಾವು ಯುವಕರು, ಮೊದಲನೆಯ ಸಲ ವಿಧಾನಸಭೆಗೆ ಬಂದಿದ್ದೇವೆ, ಆದರೆ ನಮಗೆ ಮಾತನಾಡಲು ಅವಕಾಶವೇ ಸಿಗುತ್ತಿಲ್ಲ. ಪ್ರಶ್ನೋತ್ತರ ಅವಧಿಯಲ್ಲಿ ನಮಗೆ ಸಿಕ್ಕಿರುವ ಅವಕಾಶವನ್ನೇ ಉಪಯೋಗಿಸಲು ಸಾಧ್ಯವಾಗಲಿಲ್ಲವೆಂದರೆ ಈ ಸದನದಲ್ಲಿ ನಾವು ಹೇಗೆ ಇರಬೇಕಾಗುತ್ತದೆ? ತಾವು ನಮ್ಮ ನೋವನ್ನು ಅರ್ಥ ಮಾಡಿಕೊಂಡಿದ್ದೀರಿ. ನಮಗೂ ಮಾತನಾಡಲು ಅವಕಾಶ ಕೊಡಬೇಕು. ಬಿಲಿಯ ಅನೇಕ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಎಂ.ರವರು ಮಾತನಾಡಿದರು. ಆದರೆ ನಾವು ಮಾತನಾಡುವುದನ್ನು ಕೇಳಲು